ವಿದ್ಯುತ್ ನಿಗಮದಲ್ಲಿ ಸೇವೆಯ ವಿಸ್ತರಣೆ

500 -ಶ್ರೀ ಕೆ. ಪ್ರತಾಪ ಚಂದ್ರಶೇಖರ ಶೆಟ್ಟಿ (ಕುಂದಾಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕರ್ನಾಟಕ ವಿದ್ಯುತ್ ನಿಗಮದಲ್ಲಿ ಪ.ಜಾತಿ ಮತ್ತು ಪ.ಪಂ ನೌಕರರಿಗೆ ಸರ್ಕಾರದ ಅಧಿನಿಯಮದಂತೆ ಬರಬೇಕಾದ ಮುಂಬಡ್ತಿ ಎಷ್ಟು ? ಹಾಗೂ ಒಟ್ಟು ಪ್ರಮಾಣ ಶೇ. 18ರಷ್ಟು ನೌಕರರನ್ನು ನೇಮಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?*

ಆ) *ಈ ನಿಗಮದಲ್ಲಿ ನಿವೃತ್ತಿ ಹೊಂದಿರುವ ಉನ್ನತ ಹುದ್ದೆಯ ಅಧಿಕಾರಿಗಳಿಗೆ ಇನ್ನೂ ಕೆಲವು ಕಾಲ ಸೇವೆಯಲ್ಲಿ ಮುಂದುವರಿಯುವ ಅವಕಾಶ ಮಾಡಲಾಗದೆಯೇ ?*

ಇ) *ನಿಗಮದಲ್ಲಿ ಉನ್ನತ ದರ್ಜೆಯ ಅಧಿಕಾರಿಗಳನ್ನು ನಿವೃತ್ತಿಯ ನಂತರ ನೌಕರಿಯಲ್ಲಿ ಮುಂದುವರಿಯಲು ಅವಕಾಶ ಕಲ್ಪಿಸಿಕೊಟ್ಟಿದ್ದಲ್ಲಿ, ಇದರಿಂದ ಪ.ಜಾತಿ ಮತ್ತು ಪ.ಪಂಗಡಗಳ ಅಧಿಕಾರಿಗಳಿಗೆ ಅನ್ಯಾಯವಾಗುವುದಿಲ್ಲವೇ ?*

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ವಿದ್ಯುತ್ ನಿಗಮವು, ನೇರ ನೇಮಕಾತಿ ಹಾಗೂ ಮುಂಬಡ್ತಿಗಳಿರಡರಲ್ಲಿಯೂ, ಕಾಲಕಾಲಕ್ಕೆ ಜಾರಿಯಲ್ಲಿರುವಂತೆ ರಾಜ್ಯ ಸರ್ಕಾರದ ಮೀಸಲಾತಿ ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬರುತ್ತಿದೆ. ದಿನಾಂಕ 27.4.1978ರಿಂದ, ಅಂದರೆ ರಾಜ್ಯ ಸರ್ಕಾರದ ಮುಂಬಡ್ತಿಯಲ್ಲಿನ ಮೀಸಲಾತಿ ನೀತಿಯು ಜಾರಿಗೆ ಬಂದ ದಿನಾಂಕದಿಂದಲೂ, ರಾಜ್ಯ ಸರ್ಕಾರದ ನೀತಿಯನುಸಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ರೋಸ್ಟರ್ ಅನುಸಾರ ಈ ಕೆಳಕಂಡಂತೆ ಮುಂಬಡ್ತಿ ಸ್ಥಾನಗಳನ್ನು ಗುರುತಿಸಲಾಗಿದೆ.

ಕ್ರ.ಸಂ.	ವರ್ಗ	ಪ.ಜಾತಿ	ಪ.ಪಂಗಡ
1.	ವರ್ಕ್ ಮೆನ್ (74 ವಿವಿಧ ವೃಂದಗಳು)	641	174
2.	ಕಾರ್ಪೊರೇಟ್ (21 ವಿವಿಧ ವೃಂದಗಳು)	115	36

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಭಟ್ಕಳದಲ್ಲಿ ಕಳ್ಳಸಾಗಾಣಿಕೆ ಚಟುವಟಿಕೆಗಳನ್ನು ನಿರ್ಬಂಧಿಸುವುದು.

501 -ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಗೃಹ ವಕ್ತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಭಟ್ಕಳದಲ್ಲಿ ಪುನಃ ಕಳ್ಳಸಾಗಾಣಿಕೆ ವಹಿವಾಟುಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಅ) ಭಟ್ಕಳ ಸಮುದ್ರ ತೀರದಲ್ಲಿ ಕಳ್ಳ ಸಾಗಾಣಿಕೆ ನಿರ್ಬಂಧಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಇ) ಇತರ ಮೂಲದಿಂದ ಭಟ್ಕಳ ಪ್ರವೇಶಿಸುತ್ತಿರುವ ಕಳ್ಳ ಸಾಗಾಣಿಕೆ ಮಾಲುಗಳನ್ನು ನಿರ್ಭಂಧಿಸಲು ಸರ್ಕಾರ ಕ್ರಮ ಕೈಗೊಳ್ಳುವರೆ?

ಈ) ಭಟ್ಕಳದಲ್ಲಿ ಸಂಪೂರ್ಣವಾಗಿ ಕಳ್ಳಸಾಗಾಣಿಕೆ ವಹಿವಾಟು ನಿರ್ಬಂಧಿಸಲು ಸರ್ಕಾರದವರು ಅಗತ್ಯ ಕ್ರಮ ಕೈಗೊಳ್ಳುವರೇ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಭಟ್ಕಳದಲ್ಲಿ ಯಾವುದೇ ಕಳ್ಳ ಸಾಗಾಣಿಕೆ ನಡೆದಿರುವುದು ಕಂಡು ಬಂದಿರುವುದಿಲ್ಲ.

ಆ) ಸಮುದ್ರ ತೀರದಲ್ಲಿ ಕಳ್ಳ ಸಾಗಾಣಿಕೆ ತಡೆಗಟ್ಟಲು ವಿಶೇಷ ಇಂಟಿಜೆನ್ಸ್ ಟೀಮನ್ನು ರಚಿಸಿದ್ದು, ಇದರ ಕೇಂದ್ರ ಸ್ಥಾನ ಭಟ್ಕಳದಲ್ಲಿದೆ. ಇದು ಭಟ್ಕಳ ಪೋಲೀಸ್ ಕಛೇರಿ ಎ.ಎಸ್.ಪಿ.ರವರ ನೇತೃತ್ವದಲ್ಲಿ ಭಟ್ಕಳ ಪಟ್ಟಣ ಹಾಗೂ ಸುತ್ತಮುತ್ತ ಮಾಹಿತಿಗಳನ್ನು ಸಂಗ್ರಹಿಸುವ ಕಾರ್ಯ ನಿರ್ವಹಿಸುತ್ತಿದೆ. ರಾತ್ರಿ ವೇಳೆ ಸೂಕ್ಷ್ಮ ಸ್ಥಳಗಳಲ್ಲಿ ಪೋಲೀಸರನ್ನು ಗಸ್ತಿಗೆ ನೇಮಿಸಿದೆ. ಇದಲ್ಲದೆ ವಾಹನಗಳ ನಿರಂತರ ತಪಾಸಣೆಗಾಗಿ ಎನ್ ಹೆಚ್ 17 ಹಾಗೂ ಬಂದರ ರಸ್ತೆಗಳಲ್ಲಿ 3 ಚೆಕ್ ಪೋಸ್ಟ್ ಗಳನ್ನು ನಿಯಮಿಸಿದೆ. ಇದಲ್ಲದೆ ಇತರೆ ಇಲಾಖೆಗಳಾದ ಕೊಸ್ಟ್ ಗಾರ್ಡ್ ಕೇಂದ್ರಿಯ ಸುಂಕದಳ, ಕೇಂದ್ರಿಯ ಅಬಕಾರಿ ಇಲಾಖೆ, ಕೇಂದ್ರಿಯ ಗುಪ್ತ ದಳ, ರಾಜ್ಯ ಗುಪ್ತ ದಳ ಸ್ಥಳೀಯ ಪೋರ್ಟ್ ಅಧಿಕಾರಿಗಳ ಸಹಕಾರದೊಂದಿಗೆ ಕಳ್ಳ ಸಾಗಾಣಿಕೆ ತಡೆಗಟ್ಟಲು ಎಲ್ಲ ಪ್ರಯತ್ನ ಮಾಡಲಾಗುತ್ತಿದೆ. ಪಶ್ಚಿಮ ವಲಯ, ಮಂಗಳೂರು ಪೋಲೀಸ್ ಮಹಾ ನಿರೀಕ್ಷಕರು, ಸಮನ್ವಯ ಅಧಿಕಾರಿಯಾಗಿರುತ್ತಾರೆ.

ಇ) ಉತ್ತರ (ಅ)ನಲ್ಲಿ ನೀಡಿರುವಂತೆ.

ಈ) ಉತ್ತರ (ಆ)ನಲ್ಲಿ ನೀಡಿರುವಂತೆ.

ಬೆಂಗಳೂರು ನಗರದಲ್ಲಿ ನಿವೇಶನಗಳ ಹಂಚಿಕೆಗಾಗಿ ಅರ್ಜಿಗಳು

502 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ನಿವೇಶನಕ್ಕಾಗಿ ಅರ್ಜಿ ಹಾಕಿರುವ ನಿವೇಶನ ರಹಿತರ ಸಂಖ್ಯೆ ಎಷ್ಟು?

ಆ) ನಿವೇಶನಗಳನ್ನು ಹಂಚಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೈಗೊಂಡಿರುವ ಕ್ರಮಗಳೇನು?

ಇ) ಎಷ್ಟು ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕ್ರಮ ಕೈಗೊಂಡಿದೆ?